ಕುಲಾ ಬೆಳೀಬೇಕೋ ಬೇಡವೋ?' ಎಂದು ಒಗಟಿನಂತೆ ಮಾತಾಡಿ ಒಂದಷ್ಟು ಬಂಡುಪದಗಳನ್ನು ಕಲಿಸಿ ಕಳಿಸಿದ್ದ. ಒಟ್ಟಿನಲ್ಲಿ ತಾವು ಮಾಡುತ್ತಿರುವುದು ದೇವರು ಮೆಚ್ಚುವ ಕೆಲಸ, ಅದರಿಂದ ಅಮ್ಮನಿಗೆ ಆನಂದವಾಗ್ತದೆ. ಲೋಕ ಸುಬಿಕ್ಸವಾಗಿರ್ತದೆ ಎಂದು ಗೊತ್ತಾಗಿತ್ತು. ಒಂಥರಾ ಸಮಾಧಾನವಾಗಿತ್ತು.

★★★

ಪರಿಷೆಯ ಹಿಂದಿನ ದಿನ ಬಂದ ಐದಾರು ಲಾರಿಗಳು ಅಮ್ಮನಗುಡಿಯ ಮುಂದೆ ದೊಡ್ಡ ದೊಡ್ಡ ಶಾಮಿಯಾನಗಳನ್ನೂ ಸಾವಿರಾರು ಕುರ್ಚಿಗಳನ್ನೂ ಇಳಿಸಿ ಹೋದವು. ಹಾರೆ ಪಿಕಾಸಿಗಳ ಸಮೇತ ಬಂದ ಹತ್ತಾರು ಆಳುಗಳು ಗುಡಿ ಮುಂದಿನ ಬಯಲನ್ನೆಲ್ಲ ಕವುಚಿಕೊಳ್ಳುವ ಹಾಗೆ ಬಣ್ಣಬಣ್ಣದ ಶಾಮಿಯಾನ ಏರಿಸಿದರು. ನಡೂ ಮಧ್ಯಕ್ಕೆ ಸರಿಯಾಗಿ ಹತ್ತಾರು ಗುಂಡಿಗಳನ್ನು ಮಾಡಿ ಸುತ್ತ ಕಟ್ಟೆ ಕಟ್ಟಿದರು. ಅದರ ಹಿಂದಕ್ಕೆ ನೂರಾರು ಸಾಲುಗಳಲ್ಲಿ ನೀಲಿ ಕೆಂಪು ಕುರ್ಚಿಗಳನ್ನು ಹಾಕಿ ಝಗಮಗಿಸುವ ದಪ್ಪ ದಪ್ಪ ಲೈಟುಗಳನ್ನು ಕಟ್ಟಿ ಕೊನೆಯ ಲಾರಿಯ ತುಂಬ ತುಂಬಿಕೊಂಡು ಬಂದಿದ್ದ ಬೃಹತ್ತಾದ ಫ್ಲೆಕ್ಸ್ ಬೋರ್ಡುಗಳನ್ನು ಊರಿನ ಮುಖ್ಯ ಜಾಗಗಳಲ್ಲಿ ನಿಲ್ಲಿಸಿದರು. ಹೂವುಗಳಿಂದ ಅಲಂಕರಿಸಿದ್ದ ಒಂದು ದೊಡ್ಡ ಬೋರ್ಡನ್ನು ದೇವಸ್ಥಾನದ ಎದುರಿಗೆ ನಿಲ್ಲಿಸಿದರು. ಅದನ್ನೆಲ್ಲ ಸಂಭ್ರಮದಿಂದ ಗುಂಪು ಕಟ್ಟಿಕೊಂಡು ನೋಡುತ್ತಿದ್ದ ಊರಿನ ಸಣ್ಣಪುಟ್ಟ ಮಕ್ಕಳಲ್ಲಿ ಕೆಲವರು ಕಷ್ಟಪಟ್ಟು ಆ ಬೋರ್ಡಿನಲ್ಲಿದ್ದ ಅಕ್ಷರಗಳನ್ನು ಕೂಡಿಸಿ ಕೂಡಿಸಿ ಓದುವ ಪ್ರಯತ್ನದಲ್ಲಿದ್ದರು. ಅಂತೂ ಕಡೆಗೆ ಅದರಲ್ಲಿ, 'ವಲ್ಮೀಕೋದ್ಭವೆ ಆದಿಶಕ್ತಿ ಶ್ರೀ ಲಕ್ಷ್ಮೀ ಪರಮೇಶ್ವರಿ ಅಮ್ಮನವರ ದೇವಸ್ಥಾನ' – ಇಂಗಂತ ಬರೆದಿದ್ದಾರೆ ಎಂಬುದು ಎಲ್ಲರಿಗೂ ಶ್ರುತವಾಯಿತು. ಇದನ್ನೆಲ್ಲ ಮಾಡಿ ತಮ್ಮ ಕೆಲಸ ಮುಗಿಯಿತೆಂಬಂತೆ ಅವರೆಲ್ಲ ಹೊರಟು ಹೋದರು.

ಜಾತ್ರೆ ದಿವಸ ಬೆಳಗಿನ ಜಾವಕ್ಕೇ ಎದ್ದ ಹನುಮಂತಣ್ಣ, ಬೇಗ ಬೇಗನೆ ನೀರು ಹೊಯ್ದುಕೊಂಡು ಹಲಗೆಯನ್ನು ನೀರೊಲೆಯ ಬೆಂಕಿಗೆ ಹಿಡಿದು ಅದು ಹದವಾಗಿ ತಮ ತಮ ತಮ ಎಂದು ನುಡಿದಾಗ ಅದು ತನ್ನನ್ನೆ ಮಾತನಾಡಿಸಿದಂತಾಗಿ ಮನಸ್ಸು ಅರಳಿತು. ಎಂಗೇ ಆತುರ ಮಾಡಿದರೂ ಗುಡಿಯ ಹತ್ತಿರಕ್ಕೆ ಬರುವ ಹೊತ್ತಿಗೆ ಆಗಲೇ ಬೆಳಗಾಯಿತ್ತು. ಬಂದು ನೋಡುತ್ತಾನೆ! ಇದೇನು ಅಮ್ಮನ ಗುಡಿಯಾ ಇಲ್ಲವೇ ಬೇರೆಲ್ಲಿಗಾದರೂ ಬಂದೆನಾ ಎಂದು ಅನುಮಾನ ಬರುವ ಹಾಗೆ ಎಲ್ಲ ಬದಲಾಗಿ ಹೋಗಿತ್ತು. ವಿಶಾಲವಾಗಿ ಕಟ್ಟಿದ್ದ ಶಾಮಿಯಾನ ಪೆಂಡಾಲಿನ ನಡುವೆ ಮಾಡಿದ್ದ ಗುಂಡಿಗಳಲ್ಲಿ ಬೆಂಕಿ ಧಗ ಧಗಾ ಉರಿಯುತ್ತಿತ್ತು. ಅದರ ಸುತ್ತ ಕೆಂಪು, ಕಾವಿಬಣ್ಣದ ಶಾಲುಗಳನ್ನು ಸುತ್ತಿಕೊಂಡಿದ್ದ ಬ್ರಾಹ್ಮಣರು ಬೆಂಕಿಗೆ ಏನೇನೋ ಹಾಕುತ್ತಿದ್ದರು. ಅಲ್ಲಿ ಹೊಂದಿಸಿಟ್ಟಿದ್ದ ಮೈಕುಗಳಿಂದ ಬರುತ್ತಿದ್ದ ಮಂತ್ರದಪದಗಳು ಊರನ್ನೆಲ್ಲ ಕವುಚಿಕೊಂಡಿದ್ದವು. ಸಮಸ್ಯೆಯೆಂದರೆ ತಾನು ಈಗ ಎಲ್ಲಿಯವರೆಗೆ ಹೋಗಬಹುದು ಮತ್ತು ಎಲ್ಲಿ ನಿಂತು ಹಲಗೆ ಬಾರಿಸಬೇಕು ಎಂಬುದು ಗೊತ್ತಾಗದೆ ಹನುಮಂತಣ್ಣನಿಗೆ ಪರದಾಟಕ್ಕಿಟ್ಟುಕೊಂಡಿತು. ಸುತ್ತ ಗಮನಿಸಿ ನೋಡಿದಾಗ ಉರುಮೆ, ಮೌರಿ, ದೋಣೆನವರು ಕೂಡ ಪೆಂಡಾಲಿನಿಂದ ದೂರದಲ್ಲಿ ನಿಂತು ವಾದ್ಯ ಮಾಡಬೇಕೆ ಬೇಡವೆ ಎಂಬ ಗೊಂದಲದಲ್ಲಿದ್ದರು. ಏಕೆಂದರೆ ಒಳ್ಳೆ ಬಿಳಿ ಬಿಳಿ ಬಟ್ಟೇ ಹಾಕಿಕೊಂಡು ಹಳದಿ ಅಂಗವಸ್ತ್ರಗಳನ್ನು ಹೆಗಲ ಮೇಲೆ ಹಾಕಿಕೊಂಡು ದುಂಡ ದುಂಡಗೆ ಇದ್ದ ನಾಗಸ್ವರ ಡೋಲಕ್ಕಿನವರು ಅಮ್ಮನ ಗುಡಿ ಬಾಗಿಲಲ್ಲಿ ನಿಂತು ನುಡಿಸುತ್ತಿದ್ದರು. ಜೊತೆಗೆ ಮಂತ್ರಗಳನ್ನು ಕಕ್ಕುತ್ತಿದ್ದ ಹತ್ತಾರು ಮೈಕುಗಳ ಅಬ್ಬರದ ಜೊತೆಗೆ ಪೈಪೋಟಿ ಮಾಡುವುದು ಸುಲಭದ ಸಂಗತಿಯಲ್ಲ ಎಂಬುದು ಅವರೆಲ್ಲರಿಗೆ ಅರಿವಾಗಿತ್ತು. ಹಾಗಾಗಿ ಅವರು ತಮ್ಮ ವಾದ್ಯಗಳನ್ನು ಬಾರಿಸುವ ಕಡ್ಡಿಗಳನ್ನು ಅವುಗಳ ಜಾಗಕ್ಕೆ ಸೇರಿಸಿ ಪಿಳಿಪಿಳಿ ಕಣ್ಣುಬಿಡುತ್ತ ನಿಂತಿದ್ದರು. ನಡು ನಡುವೆ ಮೈಕಿನಲ್ಲಿ ಇವತ್ತು ಹನ್ನೊಂದು ಗಂಟೆಗೆ ಮಾನ್ಯ ಶಾಸಕರಾದ ಕದುರಪ್ಪನವರು ಬರುವವರಿದ್ದಾರೆಂದೂ ಅವರು ಬಂದು